**M.V.C. 333/2022**
**P.W.-1**

ಸಾಕ್ಷಿಯನ್ನು ದಿನಾಂಕ **11-02-2025** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ **3** ನೇ ಎದುರುದಾರರ ಪರ ಶ್ರೀ ಜಿ.ಎಸ್.ಸಿ. ವಕೀಲರಿಂದ.

ಅಪಘಾತ ಸಂಭವಿಸಿದಾಗ ನಾನು ಸ್ಥಳದಲ್ಲಿ ಇರಲಿಲ್ಲ. ಅಪಘಾತವನ್ನು ನೋಡಿದವರು ಬೇರೆಯವರು ಇದ್ದಾರೆಂದರೆ ಸರಿ. ಅಪಘಾತದ ಬಗ್ಗೆ ನಾನೇ ದೂರುಕೊಟ್ಟಿರುತ್ತೇನೆ. ನಾನು ಎರಡು ದಿನ ತಡವಾಗಿ ದೂರು ಕೊಟ್ಟಿರುತ್ತೇನೆ

ಎಂದರೆ ಸರಿ. ನನ್ನ ತಂದೆಗೆ ಚಿಕಿತ್ಸೆ ಕೊಡಿಸುವ ಸಲುವಾಗಿ ದೂರು ಕೊಡಲು ತಡವಾಗಿದೆ. ನಾನು ದೂರು ಕೊಟ್ಟ ನಂತರ ಪೋಲೀಸರು ವಿಚಾರಣೆ ಮಾಡಿರುತ್ತಾರೆ.

ಆ ದಿನ ನಮ್ಮ ತಂದೆ ಕಚ್ಚಿಗೆಬೈಲಿನಿಂದ ಬಟ್ಟೆಮಲ್ಲಪ್ಪದ ಕಡೆ ಹೋಗುತ್ತಿದ್ದರು. ಸಾಕ್ಷಿಗೆ ಈಗ ಕಚ್ಚಾ ನಕ್ಷೆ ನಿ.ಪಿ.**-8** ಅನ್ನು ತೋರಿಸಿ ಅಪಘಾತವು ರಸ್ತೆಯ ಮಧ್ಯೆ ಆಗಿರುತ್ತದೆ ಎಂದರೆ**?** ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ಅಪಘಾತ ಸಂಭವಿಸಲು ನನ್ನ ತಂದೆಯ ನಿರ್ಲಕ್ಷ ಕಾರಣವಾಗಿದ್ದು **1** ನೇ ಎದುರುದಾರನ ತಪ್ಪು ಇಲ್ಲಾ ಎಂದರೆ**?** ಸಾಕ್ಷಿಯು **1** ನೇ ಎದುರುದಾರಿನ ತಪ್ಪಿನಿಂದ ಅಪಘಾತ ಸಂಭವಿಸಿರುತ್ತದೆ ಎಂದು ಹೇಳುತ್ತಾರೆ. ಎರಡೂ ವಾಹನಗಳನ್ನು ತಪಾಸಣೆಗೆ ಒಳಪಡಿಸಿ ವಾಹನ ನಿರೀಕ್ಷಕರು ವರದಿ ಕೊಟ್ಟಿರುತ್ತಾರೆ ಎಂದರೆ ಸರಿ. ಐ.ಎಂ.ವಿ. ವರದಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ**?** ಸಾಕ್ಷಿಯು ಹಾಜರುಪಡಿಸಿರುತ್ತೇನೆ ಎಂದು ಹೇಳುತ್ತಾರೆ. ಸದರಿ ದಾಖಲೆಯನ್ನು ನೋಡಿರುತ್ತೇನೆ. ಸದರಿ ಐ.ಎಂ.ವಿ. ರಿಪೋರ್ಟ್ ನಲ್ಲಿ ಏನಿದೆ ಎಂದು ಗೊತ್ತಿಲ್ಲ. ಆ ದಿನ ನಮ್ಮ ತಂದೆಯವರು

ಕಾರಿನ ಎಡಭಾಗದ ಡೋರ್ ಗೆ ತಾಗಿಸಿ ಬಿದ್ದಿರುತ್ತಾರೆ ಎಂದರೆ**?** ಸಾಕ್ಷಿಯು ನಮ್ಮ ತಂದೆಯ ತಪ್ಪಿನಿಂದ ಅಪಘಾತ ಆಗಿಲ್ಲ ಎಂದು ಹೇಳುತ್ತಾರೆ**.**

ಅಪಘಾತ ಸಂಭವಿಸಿದ ನಂತರ ಹೊಸನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿರುತ್ತೇನೆ**.** ಈ ಬಗ್ಗೆ ದಾಖಲೆ ಇದೆ**.** ಸದರಿ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ**?** ಸಾಕ್ಷಿಯು ಹಾಜರುಪಡಿಸಿರುತ್ತೇನೆ ಎಂದು ಹೇಳುತ್ತಾರೆ**.** ನಂತರ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ತೋರಿಸಿರುತ್ತೇನೆ**.** ಸದರಿ ಆಸ್ಪತ್ರೆಯಲ್ಲಿ ಐ**.**ಸಿ**.**ಯು**.** ನಲ್ಲಿ ಚಿಕಿತ್ಸೆ ಕೊಡಿಸಿರುತ್ತೇನೆ**.** ಆ ಬಗ್ಗೆ ದಾಖಲೆ ಇದೆ**.** ಸದರಿ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ**?** ಸಾಕ್ಷಿಯು ಹಾಜರುಪಡಿಸಿರುತ್ತೇವೆ ಎಂದು ಹೇಳುತ್ತಾರೆ**.**

ನಮ್ಮ ತಂದೆ ದಿನಾಂಕ **16-02-2021** ರಂದು ತೀರಿಕೊಂಡಿರುತ್ತಾರೆ**.** ನಮ್ಮ ತಂದೆಗೆ ದೇಹದ ಯಾವ ಯಾವ ಭಾಗದಲ್ಲಿ ಗಾಯವಾಗಿತ್ತು ಎಂದರೆ**?** ಸಾಕ್ಷಿಯು ಕಾಲು**,** ಕುತ್ತಿಗೆ ಮತ್ತು ದವಡೆಗೆ ಗಾಯವಾಗಿತ್ತು ಎಂದು ಹೇಳುತ್ತಾರೆ**.** ನಮ್ಮ ತಂದೆಯ ಸಾವಿಗೆ ನಿಖರವಾದ ಕಾರಣವನ್ನು ವೈದ್ಯರು ಪಿ**.**ಎಂ**.** ವರದಿ ನಿ**.**ಪಿ**.-6**

ರಲ್ಲಿ ಬರೆದಿರುವುದಿಲ್ಲ ಎಂದರೆ**?** ಸಾಕ್ಷಿಯು ಬರೆದಿರುತ್ತಾರೆ ಎಂದು ಹೇಳುತ್ತಾರೆ**.** ನಮ್ಮ ತಂದೆಯವರು ಅಪಘಾತದಿಂದಲೇ ತೀರಿಕೊಂಡಿರುತ್ತಾರೆ ಎಂದು ನಿ**.**ಪಿ**.-6** ರಲ್ಲಿ ಬರೆದಿರುವುದಿಲ್ಲ ಎಂದರೆ**?** ಸಾಕ್ಷಿಯು ಬರೆದಿರುತ್ತಾರೆ ಎಂದು ಹೇಳುತ್ತಾರೆ**.** ನಮ್ಮ ತಂದೆಗೆ ಆಗಿದ್ದಂತಹ ಗಾಯಗಳು ಮಾರಣಾಂತಿಕ ಗಾಯಗಳುವಾಗಿರಲಿಲ್ಲ ಎಂದರೆ ಸರಿಯಲ್ಲ**.** ನಮ್ಮ ತಂದೆಯವರು ಹೃದಯಾಘಾತದಿಂದ ತೀರಿಕೊಂಡಿರುತ್ತಾರೆ ಎಂದು ನಿ**.**ಪಿ**.-10** ರಲ್ಲಿ ಬರೆದಿರುತ್ತಾರೆ ಎಂದರೆ**?** ಸಾಕ್ಷಿಯು ನಮ್ಮ ತಂದೆ ಹೃದಯಾಘಾತದಿಂದ ತೀರಿಕೊಂಡಿರುವುದಿಲ್ಲ ಎಂದು ಹೇಳುತ್ತಾರೆ**.**

ನನಗೆ ಓರ್ವ ಅಣ್ಣ ಇದ್ದಾರೆ ಎಂದರೆ ಸರಿ**.** ಅವರ ಹೆಸರು ಸುಧೀರ ಜೀವಂತ ಇದ್ದಾರೆ**.** ಸದರಿ ಸುಧೀರ ಅನ್ನು ಈ ಕೇಸ್ ನಲ್ಲಿ ಪಾರ್ಟಿಯನ್ನಾಗಿ ಮಾಡಿರುವುದಿಲ್ಲ ಎಂದರೆ**?** ಸಾಕ್ಷಿಯು ಅವರು ಆಸ್ತಿಯಲ್ಲಿ ಹಿಸ್ಸೆ ತೆಗೆದುಕೊಂಡು ಪ್ರತ್ಯೇಕವಾಗಿ ಇದ್ದಾರೆ ಎಂದು ಹೇಳುತ್ತಾರೆ**.** ನನಗೆ ವಿವಾಹವಾಗಿದೆ ಎಂದರೆ ಸರಿ**.** ಸಾಕ್ಷಿಯು ಮುಂದುವರೆದು ನನ್ನ ಗಂಡ ನನ್ನ ವಿರುದ್ಧ ವಿವಾಹ ವಿಚ್ಛೇದನ ಅರ್ಜಿ ದಾಖಲಿಸಿದಾಗಿನಿಂದ ನಾನು ನನ್ನ ಅಮ್ಮನ ಜೊತೆ ತವರು ಮನೆಯಲ್ಲಿ ಇದ್ದೇನೆ ಎಂದು ಹೇಳುತ್ತಾರೆ**.** ಸದರಿ ವಿವಾಹ ವಿಚ್ಛೇದನ ಅರ್ಜಿ ವಿಚಾರಣೆಗೆ ಇದೆಯಾ ಎಂದರೆ**?** ಸಾಕ್ಷಿಯು ಸದರಿ ಅರ್ಜಿ ಸಾಗರ ನ್ಯಾಯಾಲಯದಲ್ಲಿ ವಜಾ ಆಗಿ ನಂತರ

ಮಾನ್ಯ ಉಚ್ಚ ನ್ಯಾಯಾಲಯದಲ್ಲಿಯೂ ಸಹ ವಜಾ ಆಗಿದ್ದು ನಾನು ಹೊಸನಗರ ನ್ಯಾಯಾಲಯದಲ್ಲಿ ನನ್ನ ಗಂಡನ ವಿರುದ್ಧ ಜೀವನಾಂಶ ಅರ್ಜಿಯನ್ನು ಹಾಕಿರುತ್ತೇನೆ. ನಾನು ನಮ್ಮ ತಾಯಿಯ ಜೊತೆ ವಾಸವಿದ್ದೇನೆ ಎಂದು ತೋರಿಸಲು ದಾಖಲೆ ಇದೆ.

ನಮ್ಮದು ಕೃಷಿ ಕುಟುಂಬ ಎಂದರೆ ಸರಿ. ನಮ್ಮ ತಂದೆಗೆ ಅಡಿಕೆ ಭಾಗಯ್ತು **4** ಎಕರೆ **13** ಗುಂಟೆ ಜಮೀನು ಇತ್ತು. ಸದರಿ ಜಮೀನಿನ ಆದಾಯದಿಂದಲೇ ನಮ್ಮ ಕುಟುಂಬ ನಡೆಯುತ್ತಿತ್ತು ಎಂದರೆ ಸರಿ. ಸದರಿ ಜಮೀನಿನಿಂದ ಈಗಲೂ ಸಹ ಆದಾಯ ಬರುತ್ತಿದೆ ಎಂದರೆ**?** ಸಾಕ್ಷಿಯು ನಮ್ಮ ತಂದೆ ತೀರಕೊಂಡಾಗಿನಿಂದ ಯಾವುದೇ ಆದಾಯ ಬರುತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಜಮೀನಿನ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ**?** ಸಾಕ್ಷಿಯು ಹಾಜರುಪಡಿಸಿರುತ್ತೇನೆ ಎಂದು ಹೇಳುತ್ತಾರೆ. ನಮ್ಮ ತಂದೆಯ ಜಮೀನಿನ ಪಹಣಿಯಲ್ಲಿ ಈಗ ಬೀಳು ಎಂದು ಇದೆ ಎಂದರೆ**?** ಸಾಕ್ಷಿಯು ಬೀಳು ಎಂದು ಇದೆ ಎಂದು ಹೇಳುತ್ತಾರೆ. ಸದರಿ ಪಹಣಿಯನ್ನು ಹಾಜರುಪಡಿಸಲು ನಮಗೆ ಯಾವುದೇ ತೊಂದರೆ ಇಲ್ಲಾ ಎಂದರೆ ಸರಿ. ನಾನು ನನ್ನ ತಂದೆಯ ಆದಾಯದ ಮೇಲೆ

ಅವಲಂಬಿತರಾಗಿರಲಿಲ್ಲ ಎಂದರೆ**?** ಸಾಕ್ಷಿಯು ನಾನು ಮತ್ತು ನನ್ನ ತಾಯಿ ನನ್ನ ತಂದೆಯ ಆದಾಯದ ಮೇಲೆ ಅವಲಂಬಿತರಾಗಿರುತ್ತವೆ ಎಂದು ಹೇಳುತ್ತಾರೆ.

ನಮ್ಮ ತಂದೆಯ ಜಮೀನಿನಿಂದ ಬರುತ್ತಕ್ಕಂತಹ ಆದಾಯದ ಲೆಕ್ಕ ಪತ್ರದ ಬಗ್ಗೆ ದಾಖಲೆ ಇದೆ. ಸದರಿ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಮ್ಮ ತಂದೆ ತೀರಿಕೊಂಡಾಗ **68** ವರ್ಷ ವಯಸ್ಸಾಗಿತ್ತು. ಆ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿದ್ದೀರಾ ಎಂದರೆ**?** ಸಾಕ್ಷಿಯು ಡ್ರೈವಿಂಗ್ ಲೈಸೆನ್ಸ್ ಅನ್ನು ಹಾಜರುಪಡಿಸಿರುತ್ತೇನೆ ಎಂದು ಹೇಳುತ್ತಾರೆ. ನಮ್ಮ ತಂದೆಯವರಿಗೆ ವಯಸ್ಸಾಗಿದ್ದರಿಂದ ಖಾಯಿಲೆಯಿಂದ ಬಳಲುತ್ತಿದ್ದರು ಮತ್ತು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿ. ಪ್ರಯಾಣಕ್ಕೆ, ಶವಸಂಸ್ಕಾರಕ್ಕೆ ಮತ್ತು ಒಟ್ಟು ಆದಾಯ ನಷ್ಟ ಆಗಿರುತ್ತದೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ.

ಅಪಘಾತ ಪಡಿಸಿದವರು ಯಾರು ಎಂದು ನನಗೆ ಗೊತ್ತು. ಅವರಿಗೆ ಚಾಲನಾ ಪರವಾನಿಗೆ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. **1** ನೇ ಎದುರುದಾರರರಿಗೆ ಡಿ.ಎಲ್. ಇಲ್ಲಾ ಎಂದು ಪೋಲೀಸರು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ

ಎಂದರೆ**?** ಸಾಕ್ಷಿಯು ಸಲ್ಲಿಸಿರಬಹುದು ಎಂದು ಹೇಳುತ್ತಾರೆ**.** ನಾವು ತುಂಬಾ ಪರಿಹಾರ ಕೇಳಿದ್ದು ಅಷ್ಟು ಪರಿಹಾರಕ್ಕೆ ಅರ್ಹರಲ್ಲ ಎಂದರೆ ಸರಿಯಲ್ಲ**. 1** ನೇ ಎದುರುದಾರರಿಗೆ ಚಾಲನಾ ಪರವಾನಿಗೆ ಇರಲಿಲ್ಲವಾದ್ದರಿಂದ ನಮಗೆ ಪರಿಹಾರ ಕೊಡಲು **3** ನೇ ಎದುರುದಾರರು ಬಾದ್ಯಸ್ಥರಲ್ಲ ಎಂದರೆ**?** ಸಾಕ್ಷಿಯು **3** ನೇ ಎದುರುದಾರರು ಪರಿಹಾರ ಕೊಡಬೇಕೆಂದು ಹೇಳುತ್ತಾರೆ**.**

<u>ಪಾಟೀ ಸವಾಲು:</u>**- 1** ನೇ ಎದುರುದಾರರ ಪರ ಶ್ರೀ ಡಿ**.**ಎನ್**.**ಹೆಚ್**.** ವಕೀಲರಿಂದ**.**

ನಮ್ಮ ತಂದೆಯವರು ಈ ಹಿಂದೆ ವಿಲ್ ಫ್ರೆಡ್ ಡಿಕಾಸ್ಟಾರವರಿಗೆ ಅಪಘಾತ ಪಡಿಸಿದ್ದರು ಎಂದರೆ ಸರಿಯಲ್ಲ**.** ಸದರಿ ಅಪಘಾತದಲ್ಲಿ ವಿಲ್ ಫ್ರೆಡ್ ಡಿಕಾಸ್ಟಾ ತೀರಿ ಹೋಗಿದ್ದು ಪೋಲೀಸರು ನಮ್ಮ ತಂದೆಯ ವಿರುದ್ಧ ಕೇಸ್ ದಾಖಲಿಸಿದ್ದರು ಎಂದರೆ ಸರಿಯಲ್ಲ**.** ಸದರಿ ಮೃತನ ಹೆಂಡತಿ ಮತ್ತು ಮಕ್ಕಳು ನಮ್ಮ ತಂದೆಯ ವಿರುದ್ಧ ಇದೇ ನ್ಯಾಯಾಲಯದಲ್ಲಿ ಎಂ**.**ವಿ**.**ಸಿ**. 759/2016** ರಂತೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ**.** ನಮ್ಮ ತಂದೆ ತೀರಿಕೊಂಡ ನಂತರ ಪರಿಹಾರ ಹಣದ ವಸೂಲಾತಿಗಾಗಿ ನಿ**.**ಪಿ**.-21** ರಂತೆ ಅಮಲ್ಜಾರಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ**.** ಎಂ**.**ವಿ**.**ಸಿ**. 759/2016** ರಲ್ಲಿ ಆದಂತಹ ಪರಿಹಾರದ ಆದೇಶವನ್ನು ಪ್ರಶ್ನಿಸಿ ನಾವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದೇವು

ಎಂದರೆ**?** ಸಾಕ್ಷಿಯು ರೂ.**5** ಲಕ್ಷ ಡಿಪಾಸಿಟ್ ಮಾಡಿರುತ್ತೇವೆ ಎಂದು ಹೇಳುತ್ತಾರೆ. ಸದರಿ ರೂ.**5** ಲಕ್ಷ ರೂಪಾಯಿ ಹಣವನ್ನು ಈ ನ್ಯಾಯಾಲಯದಲ್ಲಿ ಡಿಪಾಸಿಟ್ ಮಾಡಬೇಕೆಂದು ಮಾನ್ಯ ಉಚ್ಚ ನ್ಯಾಯಾಲಯ ಆದೇಶ ಮಾಡಿತ್ತು ಎಂದರೆ**?** ಸಾಕ್ಷಿಯು ತಡೆಯಾಜ್ಞೆ ನೀಡಿ ಡಿಪಾಸಿಟ್ ಗೆ ಆದೇಶ ಮಾಡಿತ್ತು ಎಂದು ಹೇಳುತ್ತಾರೆ. ನಮ್ಮ ತಂದೆಯವರಿಗೆ ತುಂಬಾ ವಯಸ್ಸಾಗಿದ್ದರಿಂದ ವಾಹನ ಚಾಲನೆ ಮಾಡುವ ಶಕ್ತಿ ಇರಲಿಲ್ಲ ಎಂದರೆ ಸರಿಯಲ್ಲ. ಈ ಕೇಸ್ ನ ಅಪಘಾತವು ನನ್ನ ತಂದೆಯ ತಪ್ಪಿನಿಂದ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ.

ನನ್ನ ಪಡಿತರ ಚೀಟಿ ಬೇರೆ ಇದೆ ಮತ್ತು ನಮ್ಮ ತಾಯಿಯ ಪಡಿತರ ಚೀಟಿ ಬೇರೆ ಇದೆ ಎಂದರೆ**?** ಸಾಕ್ಷಿಯು ಒಂದೇ ಇದೆ ಎಂದು ಹೇಳುತ್ತಾರೆ. ನನಗೂ ಮತ್ತು ನನ್ನ ತಾಯಿಗೆ ಸರ್ಕಾರದಿಂದ ಭಾಗ್ಯಲಕ್ಷ್ಮೀ ಯೋಜನೆ ಅಡಿಯಲ್ಲಿ ಹಣ ಬರುತ್ತಿದೆ ಎಂದರೆ ಸರಿಯಲ್ಲ. ಅದೇ ರೀತಿ ಸರ್ಕಾರದ ಎಲ್ಲಾ ಸೌಲಭ್ಯಗಳು ಸಹ ನಮ್ಮ ತಾಯಿಗೆ ಮತ್ತು ನನಗೆ ಬರುತ್ತಿವೆ ಎಂದರೆ ಸರಿಯಲ್ಲ. ನಮ್ಮ ಅಣ್ಣ ಸಹ ಬಂದು ನಮ್ಮ ತಾಯಿಯ ಯೋಗಕ್ಷೇಮ ನೋಡಿಕೊಳ್ಳುತ್ತಾರೆಂದರೆ ಸರಿಯಲ್ಲ. ನಮ್ಮ ತಾಯಿ ತೀರುಗಾಡುವುದಿಲ್ಲ ಮತ್ತು ಅವರಿಗೆ ಜಾಸ್ತಿ ಖರ್ಚು ಇಲ್ಲಾ ಎಂದರೆ**?** ಸಾಕ್ಷಿಯು ನಮ್ಮ ತಾಯಿ ಕಾಲು ಮುರಿದಿದ್ದು ಅವರಿಗೆ ತುಂಬಾ ಖರ್ಚು ಇದೆ

ಎಂದು ಹೇಳುತ್ತಾರೆ. ನಮ್ಮ ತಾಯಿಯ ಕಾಲಿನ ಮೂಳೆ ಮುರಿತ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಮ್ಮ ತಂದೆಯ ಜಮೀನಿನಿಂದ ಬರತ್ತಕ್ಕತಂಹ ಆದಾಯದಿಂದ ನಾವು ರೂ.5 ಲಕ್ಷ ರೂಪಾಯಿ ಹಣವನ್ನು ನ್ಯಾಯಾಲಯದಲ್ಲಿ ಡಿಪಾಸಿಟ್ ಮಾಡಿರುತ್ತೇವೆ ಎಂದರೆ? ಸಾಕ್ಷಿಯು 1 ಎಕರೆ ಜಮೀನು ಅಡಇಟ್ಟು ರೂ.5 ಲಕ್ಷ ಡಿಪಾಸಿಟ್ ಮಾಡಿರುತ್ತೇವೆ ಎಂದು ಹೇಳುತ್ತಾರೆ. ಜಮೀನನ್ನು ಅಡ ಇಟ್ಟಿರುವುದು ಸುಳ್ಳು ಮತ್ತು ಜಮೀನಿನಿಂದ ಸಾಕಷ್ಟು ಆದಾಯ ಇದೆ ಎಂದರೆ ಸರಿಯಲ್ಲ.

ಆ ದಿನ 1 ನೇ ಎದುರಿ ವಾಹನವನ್ನು ಚಾಲನೆ ಮಾಡುತ್ತಿದ್ದರು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಅದೇ ರೀತಿ 1 ನೇ ಎದುರಿಯ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ 1 ನೇ ಎದುರಿಯ ವಿರುದ್ಧ ಸುಳ್ಳು ಅರ್ಜಿ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ಉಳಿದ ಪಾಟೀ ಸವಾಲನ್ನು 3 ನೇ ಎದುರುದಾರರ ಪರ ಮಾಡಿರುವಂತಹ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆ:**-** ಇಲ್ಲ**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

**(**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ**.)**

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.